(ದಿನಾಂಕಃ ***14/01/2026*** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಮಾಡಿಸಲಾಯಿತು.)

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಯು.ಎನ್.ಜಿ. ವಕೀಲರಿಂದಃ-</u>**

22. ಸಂಜ್ಞೆಯ ಅಪರಾಧಗಳ ಮಾಹಿತಿ ಬಂದಾಗ ಪ್ರಕರಣ ನೋಂದಾಯಿಸಿಕೊಂಡು ಎಸ್.ಎಚ್.ಡಿ. (ಠಾಣಾ ದಿನಚರಿ) ಯಲ್ಲಿ ನಮೂದು ಮಾಡುತ್ತೇವೆ ಎನ್ನುವುದು ನಿಜ. ನಿಪಿ-1 ದೂರಿನೊಂದಿಗೆ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ. ಧ್ವನಿ ಮುದ್ರಣ ಮಾತ್ರ ಕಳಿಸಿದ್ದರು. ನಾನು ಧ್ವನಿ ಮುದ್ರಣದ ನೈಜತೆ ಕುರಿತು ತಕ್ಷಣ ಪರಿಶೀಲಿಸಿಲ್ಲ. ಅಪರಿಚಿತರ ಧ್ವನಿ ಗುರುತಿಸಲು ಆಗುವುದಿಲ್ಲ ಎನ್ನುವುದು ನಿಜ. ಠಾಣಾ ದಿನಚರಿ ಪ್ರತಿಯನ್ನು ದೋಷಾರೋಪಣಾ ಪತ್ರದೊಂದಿಗೆ ಸಲ್ಲಿಸಿಲ್ಲ.

23. ಧ್ವನಿ ಮುದ್ರಣ ಮಾಡಿಕೊಂಡಿದೆ ಎನ್ನಲಾದ ಮೊಬೈಲ್ ಅಥವಾ ಮೆಮೊರಿ ಕಾರ್ಡನ್ನು ನಾನು ಜಪ್ತಿಮಾಡಿಲ್ಲ. ನಾನು ಪಂಚರನ್ನು ಕರೆಸಿಲ್ಲ ಮತ್ತು ನಿಪಿ-2 ವಹಿಸುವಿಕೆ ಪಂಚನಾಮೆ ತಯಾರಿಸಿಲ್ಲ ಮತ್ತು ಚಾಸಾ-1 ನಿಪಿ-1 ರಂತೆ ದೂರು ಕೊಟ್ಟಿಲ್ಲ ಎನ್ನುವುದು ಸುಳ್ಳು. ಪಂಚರ ಮತ್ತು ಚಾಸಾ-1 ರ ಹಾಗೂ ಸಿಬ್ಬಂದಿಯ ಅಂಗಶೋಧನೆ ಕುರಿತು ನಿಪಿ-2 ಮತ್ತು 4 ಪಂಚನಾಮೆಗಳಲ್ಲಿ ಬರೆದಿಲ್ಲ ಎನ್ನುವುದು ನಿಜ. ಪ್ರಕರಣಕ್ಕೆ ಅನುಕೂಲವಾಗುವಂತೆ ಬೇಕಾದ ವ್ಯಕ್ತಿಗಳನ್ನು ಪಂಚರನ್ನಾಗಿ ತೋರಿಸಿದ್ದೇನೆ ಎನ್ನುವುದು ಸುಳ್ಳು.

24. ಧ್ವನಿ ಮುದ್ರಣ ಆಲಿಸುವ ಕಾಲಕ್ಕೆ ಸಂಭಾಷಣೆಯನ್ನು ಕೈಬರಹದಲ್ಲಿ ಬರೆದು ಕೊಂಡಿಲ್ಲ ಆದರೆ ಗಣಕೀಕರಣಗೊಳಿಸಲಾಗಿದೆ. ಚಾಸಾ-1 ರೂ.500/-ರ 4 ನೋಟುಗಳು ಅಂದರೆ ರೂ.2,000/- ಕೊಟ್ಟಿಲ್ಲ ಎನ್ನುವುದು ಸುಳ್ಳು. ಪಿನಾಫ್ತಲಿನ್ ಪೌಡರ ಕೈ ಮತ್ತು ವಸ್ತುಗಳಿಗೆ ಸವರಿದಾಗ ಬರಿಗಣ್ಣಿಗೆ ಕಾಣುವುದಿಲ್ಲ ಎನ್ನುವುದು ನಿಜ. ನಾನು ಮಾದರಿ ದ್ರಾವಣ ತಯಾರಿಸಿಲ್ಲ, ಪಿನಾಫ್ತಲಿನ್ ಪೌಡರ ನೋಟುಗಳಿಗೆ ಸವರಿಲ್ಲ ಮತ್ತು ದ್ರಾವಣದಿಂದ ಕೈತೊಳೆದಿಲ್ಲ ಎನ್ನುವುದು ಸುಳ್ಳು. ಪ್ರಕರಣಕ್ಕೆ ಅನುಕೂಲವಾಗುವಂತೆ ನಿಪಿ-2 ನ್ನು ಸೃಷ್ಟಿಸಿದ್ದೇನೆ ಎನ್ನುವುದು ಸುಳ್ಳು.

25. ಆರೋಪಿ ಲಂಚ ಕೇಳಿದಾಗ ಕೊಟ್ಟು ಸನ್ನೆ ಮಾಡುವ ಮೂಲಕ ನನಗೆ ತಿಳಿಸುವಂತೆ ನಾನು ಚಾಸಾ-1 ರಿಗೆ ತಿಳಿಸಿಲ್ಲ ಎನ್ನುವುದು ಸುಳ್ಳು. ನಾನು, ಪಂಚರು, ಸಿಬ್ಬಂದಿ ಮತ್ತು ಚಾಸಾ-1 ರೊಂದಿಗೆ ಆರೋಪಿ ಕಾರ್ಯಾಲಯದ ಕಡೆಗೆ ಹೋಗಿಲ್ಲ ಎನ್ನುವುದು ಸುಳ್ಳು. ನಾವು ನಿಂತ ಜಾಗೆ ಯಿಂದ ಆರೋಪಿ ಮನೆಯಲ್ಲಿ ನಡೆದ ಘಟನೆ ನಮಗೆ ಕಾಣುತ್ತಿರಲಿಲ್ಲ ಎನ್ನುವುದು ನಿಜ. ಆರೋಪಿ ಮನೆಯ ಬಾಗಿಲಿನಿಂದ 75-100 ಅಡಿ ದೂರದಲ್ಲಿ ನಾವು ನಿಂತಿದ್ದೆವು. ಚಾಸಾ-1 ರು 1 ನೇ ಪಂಚನೊಂದಿಗೆ ಆರೋಪಿ ಮನೆಗೆ ಹೋಗಿಲ್ಲ ನಂತರ ಸನ್ನೆ ಮಾಡಿಲ್ಲ ಎನ್ನುವುದು ಸುಳ್ಳು. ಚಾಸಾ-1 ಆರೋಪಿಯ ಮನೆಗೆ ಹೋದಾಗ ಧ್ವನಿ ಮುದ್ರಣ ಮಾಡಿಕೊಂಡಿಲ್ಲ ಎನ್ನುವುದು ಸುಳ್ಳು.

26. ನಾವು ಬಂಕಾಪುರದ ವಿದ್ಯುತ್ ಶಾಖಾ ಕಛೇರಿಗೆ ಹೋಗಿಲ್ಲ ಎನ್ನುವುದು ಸುಳ್ಳು. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಮಯ ಮತ್ತು ಸ್ಥಳದಲ್ಲಿ ನಾನು ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎನ್ನುವುದು ಸುಳ್ಳು. ಮೃತ 2ನೇ ಆರೋಪಿಯ ಕೈಗಳನ್ನು ದ್ರಾವಣದಿಂದ ತೊಳೆಸಿ ದ್ರಾವಣ ಸಂಗ್ರಹಿಸಿಲ್ಲ ಎನ್ನುವುದು ಸುಳ್ಳು. ಮೃತ ಆರೋಪಿ ನಮ್ಮನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ದುಡ್ಡು ಹಾಜರುಮಾಡಿಲ್ಲ ಎನ್ನುವುದು ಸುಳ್ಳು.

27. ಈಗ ತೋರಿಸಿದ ಮುಮಾ-1 ಮತ್ತು 3 ರಿಂದ 6 ಬಾಟಲಗಳಲ್ಲಿ ಇರುವ ದ್ರಾವಣದ ಬಣ್ಣ ಬದಲಾದದ್ದು ಕಂಡುಬರುವುದಿಲ್ಲ ಎನ್ನುವುದು ನಿಜ. ಆರೋಪಿಗಳ ಮನೆಯಲ್ಲಿ ಯಾವುದೇ ಸ್ವತ್ತನ್ನು ಜಪ್ತಿಮಾಡಿಲ್ಲ ಮತ್ತು ಪಂಚನಾಮೆ ತಯಾರಿಸಿಲ್ಲ ಎನ್ನುವುದು ಸುಳ್ಳು. ಲಂಚ ಕೊಡುವ ಕಾಲಕ್ಕೆ ಮುದ್ರಿಸಿಕೊಳ್ಳಲಾದ ಧ್ವನಿ ಮುದ್ರಣದ ಮೆಮೊರಿ ಕಾರ್ಡ ದೋಷಾರೋಪಣಾ ಪತ್ರದೊಂದಿಗೆ ಹಾಜರುಮಾಡಿಲ್ಲ ಎನ್ನುವುದು ನಿಜ. ಪ್ರಕರಣಕ್ಕೆ ಅನುಕೂಲವಾಗುವಂತೆ ನಕ್ಷೆಯನ್ನು ತಯಾರಿಸಲಾಗಿದೆ ಎನ್ನುವುದು ಸುಳ್ಳು. ಪಂಚನಾಮೆ ಕಾಲಕ್ಕೆ ಯಾವ ಬೆಳಕಿತ್ತು ಎಂದು ನಿಪಿ-4 ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎನ್ನುವುದು ನಿಜ. ನಿಪಿ-4ನ್ನು ನಮ್ಮ ಠಾಣೆಯಲ್ಲಿ ತಯಾರಿಸಲಾಗಿದೆ ಎನ್ನುವುದು ಸುಳ್ಳು. ಪಂಚರ ಸಮಕ್ಷಮ ಮಾದರಿ ಧ್ವನಿ ಸಂಗ್ರಹಿಸಿಲ್ಲ ಮತ್ತು ಪಂಚನಾಮೆ ತಯಾರಿಸಿಲ್ಲ ಎನ್ನುವುದು ಸುಳ್ಳು.

28. ಹೀರಾಸಿಂಗ್ ಎನ್ನುವವರ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ಲ್ಯಾಪಟ್ಯಾಪ ಸಹಾಯದಿಂದ ಮುದ್ರಿಸಿಕೊಳ್ಳಲಾದ ಧ್ವನಿಯ ಸಿ.ಡಿ.ಯನ್ನು ತಯಾರಿಸಿಲ್ಲ ಎನ್ನುವುದು ಸುಳ್ಳು. ವಿದ್ಯುತ್ ಸಂಪರ್ಕ ನೀಡಿದ ನಂತರ ಆರ್.ಆರ್. ಸಂಖ್ಯೆ ನೀಡಲಾಗುತ್ತದೆ ಎನ್ನುವುದು ಸುಳ್ಳು. ನಿಪಿ-35ನ್ನು ಪರಿಶೀಲಿಸಿದಾಗ ದಿನಾಂಕಃ03/12/2014ರಂದು ವಿದ್ಯುತ್ ಸಂಪರ್ಕ ಕಲ್ಪಿಸಿದ್ದು ಕಂಡು ಬರುತ್ತದೆ ಎನ್ನುವುದು ನಿಜ ಆದರೆ ಸ್ಥಳದಲ್ಲಿ ಸಂಪರ್ಕ ಕಲ್ಪಿಸಿರಲಿಲ್ಲ.

29. ನಾನು ಸ್ಥಳಕ್ಕೆ ಹೋಗಿ ವಿದ್ಯುತ್ ಸಂಪರ್ಕ ಕುರಿತು ಪರಿಶೀಲಿಸಿ ಪಂಚನಾಮೆ ತಯಾರಿಸಿದ್ದೇನೆ. ನಿಪಿ-3ರಲ್ಲಿ ಐ.ಪಿ. ಸಂಖ್ಯೆ ನಮೂದು ಮಾಡಿದ್ದೇವೆ ಎನ್ನುವುದು ನಿಜ. ನಾನು ವಿದ್ಯುತ್ ಸಂಪರ್ಕ ಕುರಿತು ಪರಿಶೀಲಿಸಿ ಪಂಚನಾಮೆ ತಯಾರಿಸಿಲ್ಲ ಎನ್ನುವುದು ಸುಳ್ಳು. ಸಾಕ್ಷಿದಾರರ ಹೇಳಿಕೆಗಳನ್ನು, ಎಫ್.ಎಸ್.ಎಲ್. ವರದಿ, ಅಭಿಯೋಜನಾ ಮಂಜೂರಾತಿ ದಾಖಲೆ, ಭಾ.ಸಾ.ಅ. ಕಲಂ.65(ಬಿ) ಅಡಿಯಲ್ಲಿನ ಪ್ರಮಾಣ ಪತ್ರ, ತಹಶೀಲ್ದಾರ ಮತ್ತು ಪುರಸಭೆ ಕಾರ್ಯಾಲಯದ ದಾಖಲೆ, ವಿದ್ಯುತ್ ಇಲಾಖೆಯ ದಾಖಲೆ ಮತ್ತು ಇತರ ದಾಖಲೆಗಳನ್ನು ಪ್ರಕರಣಕ್ಕೆ ಅನುಕೂಲ ವಾಗುವಂತೆ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸುಳ್ಳು. ನಾನು 1 ಮತ್ತು 2ನೇ ಆರೋಪಿಗಳ ಮೊಬೈಲ್ ಕುರಿತು ಎಸ್.ಡಿ.ಆರ್. ಮತ್ತು ಸಿ.ಡಿ.ಆರ್ ಸಂಗ್ರಹಿಸಿಲ್ಲ ಎನ್ನುವುದು ಸುಳ್ಳು.

30. ಅಸಾ-4 ನಿಪಿ-11ರಂತೆ ಹೇಳಿಕೆ ನೀಡಿಲ್ಲ ಎನ್ನುವುದು ಸುಳ್ಳು. ಆರೋಪಿಗೂ ಪ್ರಕರಣದ ಮುದ್ದೆಮಾಲಿಗೂ ಸಂಬಂಧ ಇಲ್ಲ ಎನ್ನುವುದು ಸುಳ್ಳು. ಚಾಸಾ-1ರ ಯಾವುದೇ ಕೆಲಸ

ಆರೋಪಿ ಹತ್ತಿರ ಬಾಕಿ ಇರಲಿಲ್ಲ ಎನ್ನುವುದು ಸುಳ್ಳು. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.